

ಭುಜ್‌ನಿಂದ 90 ಕಿ.ಮಿ. ದೂರದಲ್ಲಿದೆ. ಇಲ್ಲಿಗೆ ಹೋಗಲು ಸರ್ಕಾರಿ ಸಾರಿಗೆ ವ್ಯವಸ್ಥೆಯ ಜೊತೆಗೆ ಖಾಸಗಿ ವಾಹನಗಳೂ ಲಭ್ಯ. ಸೂರ್ಯಾಸ್ತ ಪ್ರಶಸ್ತ ಸಮಯ. ಸೂರ್ಯ ಬಾನಂಚಿಗೆ ಸರಿಯುವ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಬರುವವರ ಸಂಖ್ಯೆ ಹೆಚ್ಚು. ಹುಣ್ಣಿಮೆ ಬೆಳದಿಂಗಳಿನಲ್ಲಿ ಈ ಸಮುದ್ರದ ಹೊಳಪು ಇಮ್ಮಡಿಗೊಳ್ಳುತ್ತದೆ. ಆಗ ಪ್ರವಾಸಿಗರ ಸಂಖ್ಯೆ ಅತ್ಯಧಿಕ.

ಮರುಭೂಮಿಗೆ 2 ಕಿ.ಮಿ. ದೂರ ಇರುವಾಗಲೇ ವಾಹನಗಳ ನಿಲುಗಡೆ. ಸೈನಿಕರ ತಪಾಸಣೆ ಠಾಣೆಯಿಂದ ಅನುಮತಿ ಪಡೆದು ಸರ್ಕಾರವೇ ವ್ಯವಸ್ಥೆ ಮಾಡಿರುವ ವಾಹನದಲ್ಲಿ ಉಚಿತ ಪ್ರಯಾಣಿಸಬಹುದು. ನಂತರ ಒಂದಿಷ್ಟು ದೂರ ಕಾಲ್ನಡಿಗೆ ಹಾದಿ. ಒಂಟೆ, ಒಂಟೆಯ ಗಾಡಿಗಳಲ್ಲಿಯೂ ತೆರಳಬಹುದು. ಸೂರ್ಯಾಸ್ತ ವೀಕ್ಷಣೆಗೆ ಗೋಪುರವೂ ಇದೆ.

ನಾಲ್ಕು ತಿಂಗಳ ಕಾಲ ಕಸೂತಿ ವಸ್ತುಗಳ ಪ್ರದರ್ಶನ, ರಬರಿ, ಬನ್ನಿ, ಮುತ್ವಾ ಇನ್ನಿತರೆ ಶೈಲಿಗಳ ಆಕರ್ಷಕ, ವರ್ಣರಂಜಿತ ಕರಕುಶಲ ವಸ್ತುಗಳು ಸಿಗುತ್ತವೆ. ಮನೆ ಮನೆಗಳಲ್ಲೂ ಆತಿಥ್ಯ ವ್ಯವಸ್ಥೆ ಮಾಡಿಕೊಡುತ್ತಾರೆ. ಕಾಸಿಗೆ ತಕ್ಕಂತೆ ಕಜ್ಜಾಯ. ಖಾಸಗಿ ಡೇರೆ, ವಸತಿಗೃಹಗಳಲ್ಲೂ ತಂಗಬಹುದು. ಸ್ಥಳೀಯ ಕಲಾವಿದರ ಮನರಂಜನೆ ವೀಕ್ಷಿಸಬಹುದು. ಈ ದಿನಗಳಲ್ಲಿ ನೂರಾರು ಟೆಂಟ್‌ಗಳು ತಲೆ ಎತ್ತಿರುತ್ತವೆ. ಇದನ್ನು ಟೆಂಟ್‌ಸಿಟಿ ಎಂದೇ ಕರೆಯುತ್ತಾರೆ. ಸ್ವಲ್ಪ ದುಬಾರಿ, ಮೊದಲೇ ಕಾದಿರಿಸಬೇಕು. ಅದಕ್ಕಾಗಿ ಏಜೆನ್ಸಿಗಳೂ ಇವೆ. ಆನ್‌ಲೈನ್ ಮೂಲಕವೂ ವ್ಯವಹರಿಸಬಹುದು.

ಬೆಂಗಳೂರಿನಿಂದ ಭುಜ್‌ಗೆ ನೇರ ರೈಲು ಸಂಪರ್ಕವಿಲ್ಲ. ಮುಂಬೈ, ಅಹಮದಾಬಾದ್, ಗಾಂಧಿ ಧಾಮಕ್ಕೆ ಹೋಗಿ ಅಲ್ಲಿಗೆ ತಲುಪಬಹುದು. ಟಿಕೆಟ್ ಮುಂಚೆಯೇ ಕಾದಿರಿಸುವುದು ಉತ್ತಮ.

ಭುಜ್‌ಗೆ ಸಮೀಪದಲ್ಲೇ ಸ್ವಾಮಿ ನಾರಾಯಣ ದೇಗುಲ, ಪ್ರಗ್ಮಹಲ್, ಹಿಮಸಾಗರ್ ಲೇಕ್ ಇನ್ನಿತರೆ ಪ್ರದೇಶಗಳನ್ನೂ ವೀಕ್ಷಿಸಬಹುದು. ಮಂಡವಿ ಸಮುದ್ರ ತೀರದಲ್ಲಿ ಶಿವರಾತ್ರಿ ದಿನಗಳಲ್ಲಿ ಗಾಳಿಪಟ ಉತ್ಸವ ಜರುಗುವುದು ವಿಶೇಷ. ಮನೆ ಮಂದಿ ಸಮುದ್ರ ತೀರಕ್ಕೆ ಆಗಮಿಸಿ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಗಾಳಿಪಟ ಹಾರಿಸಿ ಸಂಭ್ರಮಿಸುತ್ತಾರೆ.

ಕಾಲಾ ದುಂಗಲ್ (ಕಪ್ಪುಬೆಟ್ಟ) ಪ್ರದೇಶವೂ ನಯನ ಮನೋಹರ. ಭುಜ್‌ನಿಂದ 97 ಕಿ.ಮಿ.ದೂರದಲ್ಲಿ ಇದ್ದು ಸಮುದ್ರ ಮಟ್ಟಕ್ಕಿಂತ 462 ಎತ್ತರದಲ್ಲಿದೆ. ಕಣ್ಣು ಹಾಯಿಸಿದಷ್ಟು ದೂರ ಇಲ್ಲಿಂದ ಉಪ್ಪಿನ ಸಮುದ್ರ ಗೋಚರಿಸುತ್ತದೆ. ಗಡಿ ಪ್ರದೇಶ ಇದಾಗಿದ್ದು ಸೇನೆ ಸಿಬ್ಬಂದಿ ಸದಾ ಕಟ್ಟೆಚ್ಚರ ವಹಿಸುತ್ತಾರೆ.



